5054 ಬೆಂಗಳೂರು ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ	20000 00	896130
5054 NABARD	13500 00	13499 790
5054 ಸಕ್ಕರೆ ಕಾರ್ಖಾನೆ ರಸ್ತೆಗಳು	47 00	32 78
3054 ಯೋಜನೆ (ಮುಮಂಗ್ರಾರನಿ)	28271 00	21910 02
ಒಟ್ಟು	69934 00	50892 74
ಇ ಕಟ್ಟಡಗಳು –ಯೋಜನೇತರ		
2059 ಲೋಇ ಕಾಮಗಾರಿಗಳು	10312 00	7982 62
2059 (12ನೇ ಹಣಕಾಸು ಯೋಜನೆ)	1320 00	60 75
2216 ವಸತಿ	3984 00	3087 60
2216 ಪೀರೋಪಕರಣ	473 00	322 04
ಒಟ್ಟು	16089 00	11453 01
ಈ ರಸ್ತೆ ಮತ್ತು ಸೇತುವೆ (ಯೋಜನೇತರ)		
3054 ಯೋಜನೇತರ (12ನೇ ಹಣಕಾಸು)	14615 00	3420 70
5054 ಸಿಆರ್‌ಎಫ್	15000 00	4800 00
ಒಟ್ಟು	29615 00	8220 07
ಕೇಷಿಪ್	56300 00	42000
ಒಟ್ಟು	186876 00	120524

ಆ) ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ರಾಜ್ಯ ಹೆದ್ದಾರಿಗಳ ದುರಸ್ತಿ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿದ್ದು, ಹಳ್ಳಿಗಾಡಿನ ರಸ್ತೆಗಳು ಇಲಾಖಾ ವ್ಯಾಪ್ತಿಗೊಳಪಡುವುದಿಲ್ಲ

290 (837) ಶ್ರೀ ಅಂಜನಾ ಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ ಸಾವಿರಾರು ಬಡ ಜನತೆಗೆ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ವಿದ್ಯುತ್ ಸೌಕರ್ಯ

ಕಲ್ಪಿಸುತ್ತಿದ್ದದ್ದನ್ನು ಕಳೆದ ಒಂದೆರಡು ತಿಂಗಳುಗಳಿಂದ ಯಾವ ಮುನ್ಸೂಚನೆ ನೀಡದೇ ಏಕಾಏಕಿ ಸಂಪರ್ಕ ಕಡಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ಬಳಕೆದಾರರು ಕಟ್ಟಬೇಕಾಗಿದ್ದ 82 ಕೋಟಿ ಹಣದ ಬಾಕಿಯನ್ನು ಮನ್ನ ಮಾಡಲಾಗಿದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) .

ಅ) ಮತ್ತು ಆ) ರಾಜ್ಯದಲ್ಲಿ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುತ್ತಿಲ್ಲ

ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಸ್ಥಾವರಗಳಿಗೆ ಮಾಹೆಯಾನ 18 ಯೂನಿಟ್ಟುಗಳವರೆಗೆ ಉಚಿತವಾಗಿ ವಿದ್ಯುತ್ತನ್ನು ನೀಡಲಾಗುತ್ತಿದ್ದು ಒಂದು ವೇಳೆ 18 ಯೂನಿಟ್ಟುಗಳಿಗಿಂತ ಹೆಚ್ಚು ವಿದ್ಯುತ್ತನ್ನು ಬಳಸಿದಲ್ಲಿ ಅಥವಾ ಒಂದಕ್ಕಿಂತ ಹೆಚ್ಚು ಔಟ್‌ಲೆಟ್‌ಗಳನ್ನು ಹೊಂದಿದ್ದಲ್ಲಿ ಅಂತಹ ಸ್ಥಾವರಗಳನ್ನು ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳನ್ನಾಗಿ ಮುಂದುವರೆಸದೇ ಗೃಹಬಳಕೆ ಸ್ಥಾವರಗಳನ್ನಾಗಿ ಪರಿವರ್ತಿಸಲಾಗುವುದು ಮತ್ತು ಎಲ್ ಟಿ –2 ಜಕಾತಿಯಲ್ಲಿ ವಿದ್ಯುತ್ ದರಗಳನ್ನು ವಿಧಿಸಲಾಗುವುದು ಈ ರೀತಿಯಾಗಿ ಪರಿವರ್ತನೆಗೊಂಡ ಸ್ಥಾವರಗಳ ವಿದ್ಯುತ್ ಬಳಕೆದಾರರು ವಿದ್ಯುತ್ ಬಿಲ್ಲುಗಳನ್ನು ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಲ್ಲಿ, ಅಂತಹವರಿಗೆ ವಿದ್ಯುತ್ ಬಿಲ್ಲುಗಳ ಬಾಕಿಯನ್ನು ಚುಕ್ತಾ ಮಾಡುವಂತೆ ಮುನ್ಸೂಚನೆಯಾಗಿ ತಿಳುವಳಿಕೆ ನೋಟೀಸುಗಳನ್ನು ಜಾರಿಗೊಳಿಸಲಾಗುವುದು ತಿಳುವಳಿಕೆ ನೋಟೀಸುಗಳನ್ನು ಜಾರಿಗೊಳಿಸಿದ ನಂತರವೂ ವಿದ್ಯುತ್ ಬಿಲ್ಲುಗಳ ಬಾಕಿಯನ್ನು ಪಾವತಿಸದೇ ಇರುವ ವಿದ್ಯುತ್ ಬಳಕೆದಾರರ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ನಿಯಮಾನುಸಾರ ಕಡಿತಗೊಳಿಸಲಾಗುವುದು

ಇ) ಸರ್ಕಾರವು ದಿನಾಂಕ 16 1 2007ರ ಆದೇಶ ಸಂಖ್ಯೆ ಇಎನ್ 139 ಪಿಎಸ್ ಆರ್ 2006 ರ ಮೂಲಕ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳಿಗೆ ವಿದ್ಯುತ್ ಮೀಟರ್ ಗಳ ಅಳವಡಿಕೆಯ ಷರತ್ತಿಗೆ ಒಳಪಟ್ಟು, ದಿನಾಂಕ 31 3 2006ರ ಅಂತ್ಯದವರೆಗಿನ ಬಾಕಿಯನ್ನು ಮನ್ನಾ ಮಾಡಲು ಆದೇಶಿಸಿದೆ

291 (846) ಶ್ರೀ ಅಂಜನಾ ಮೂರ್ತಿ (ನೆಲಮಂಗಲ) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಆಯವ್ಯಯದಲ್ಲಿರುವಂತೆ ಗ್ರಾಮೀಣ ಕ್ರೀಡೆಗಳ ಅಭಿವೃದ್ಧಿಗೆ ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸಲು ಗ್ರಾಮೀಣ ಕ್ರೀಡಾನಿಧಿ ಸ್ಥಾಪಿಸಲಾಗಿದೆಯೇ,

ಆ) ಹಾಗಿದ್ದಲ್ಲಿ ಇದಕ್ಕೆ ಬಿಡುಗಡೆಯಾದ ಹಾಗೂ ಖರ್ಚಾಗಿರುವ ಹಣ ಎಷ್ಟು ?

ಮಾನ್ಯ ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು):

ಅ) ಹೌದು

ಆ) ಗ್ರಾಮೀಣ ಕ್ರೀಡಾನಿಧಿಯ ಒಂದು ಕಾರ್ಯಕ್ರಮವಾಗಿ 23 ಕ್ರೀಡಾಶಾಲೆಗಳನ್ನು ಆರಂಭಿಸಲು ರೂ 3 00 ಕೋಟಿ ರೂ ಗಳು ಮಂಜೂರಾಗಿರುತ್ತದೆ ಈ ಹಣವನ್ನು ಖರ್ಚು ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ

292 (449) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) . ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರಿಗೆ ವಿದ್ಯುಚ್ಛಕ್ತಿ ದರದಲ್ಲಿ ರಿಯಾಯಿತಿ ನೀಡಲಾಗುತ್ತಿದೆಯೇ,